ದಿನಾಂಕ: 17.10.2020

# ವಾರ್ಡ್ ಸಮಿತಿ ಸಭಾ ನಡವಳಿಗಳು, ವಾರ್ಡ್ ನಂ-54 ಹೂಡಿ

ದಿನಾಂಕ: 17.10.2020 ರಂದು ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶದಂತೆ ವಾರ್ಡ್ ಸಂಖ್ಯೆ: 54 ಹೂಡಿ ವಾರ್ಡ್ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ 54 ರ ವಾರ್ಡ್ ಕಾಮಗಾರಿ ಕಛೇರಿಯಲ್ಲಿ ಏರ್ಪಡಿಸಲಾಗಿದ್ದು ವಾರ್ಡ್‌ನ ಆರ್.ಡಬ್ಲ್ಯೂ.ಎ. ಹಾಗೂ ಸಾರ್ವಜನಿಕರೊಂದಿಗೆ ಕುಂದು ಕೊರತೆಗಳನ್ನು ಚರ್ಚಿಸಲು ನೊಡಲ್ ಅಧಿಕಾರಿಗಳು ಸೂಚಿಸಿರುವಂತೆ.

ಸಭೆಯನ್ನು ವಾರ್ಡ್ ನೋಡಲ್ ಅಧಿಕಾರಿಗಳಾದ ಡಾ//ಕಲ್ಪನಾ ಮೇಡಂ ರವರು ಸಭೆಗೆ ಆಗಮಿಸಿರುವ ಅಧಿಕಾರಿ ನೌಕರರನ್ನುಹಾಗೂ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಸಭೆ ಆರಂಭಿಸಲು ಸೂಚಿಸಿರುತ್ತಾರೆ.

**ಹಾಜರಿದ್ದ ಅಧಿಕಾರಿ ನೌಕರರು ಮತ್ತು ಆರ್.ಡಬ್ಲ್ಯೂ.ಎ.**

1. ಶ್ರೀಮತಿ. ಡಾ// ಕಲ್ಪನಾ . ನೋಡಲ್ ಅಧಿಕಾರಿ.
2. ಶ್ರೀ. ರಂಗನಾಥ್.ಆರ್. AEE Hoodi
3. ಶ್ರೀ. ಶೇಖ್ ಮೊಹಿಯುದ್ದಿನ್ AE Hoodi
4. ಶ್ರೀ. ಸಂಜಯ್. AE
5. ಶ್ರೀ. ನಾಗರಾಜ.ವಿ SHI Hoodi
6. ಶ್ರೀ. ಸುದೀಪ್. RI Hoodi
7. ಶ್ರೀ. ವೀರಪ್ಪ. JHI Hoodi
8. ಶ್ರೀ. ಸುರೇಶ್ ಬಾಬು. Marshal
9. ಶ್ರೀ. ಸುದರ್ಶನ್. Contract Sup . SWM
10. ಶ್ರೀ. ಆರೋಗ್ಯ ಸ್ವಾಮಿ. RWA Byirathi
11. ಶ್ರೀ. ಸತೀಶ್. RWA, Ayyappanagar
12. ಶ್ರೀ. ಮಂಜುನಾಥ.ವಿ. RWA, Ayyappanagar

**ನೊಡಲ್ ಅಧಿಕಾರಿಗಳು ಹಾಜರಿರುವ ಅಧಿಕಾರಿ ನೌಕರರನ್ನು ಸ್ವಾಗತಿಸಿ.**

ವಿಷಯ: ಮೊದಲಿಗೆ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಚರ್ಚಿಸಲು ತಿಳಿಸಿರುತ್ತಾರೆ.

ಅದರಂತೆ ನೋಡಲ್ ಅಧಿಕಾರಿಗಳು ಘನತ್ಯಾಜ್ಯ ನಿರ್ವಹಣೆ ಸಂಬಂಧಿಸಿದಂತೆ ವಾರ್ಡ್‌ನಲ್ಲಿ ತ್ಯಾಜ್ಯ ನಿರ್ವಹಣೆ ಬಗ್ಗೆ ತಿಳಿಸಲು ಸೂಚಿಸಲಾಗಿ ಆರ್.ಡಬ್ಲ್ಯೂ.ಎ. ಗಳಾದ ಸತೀಶ್, ಮಂಜುನಾಥ ಮತ್ತು ಆರೋಗ್ಯಸ್ವಾಮಿ ರವರಿಗೆ ನಮ್ಮ ವ್ಯಾಪ್ತಿಗಳಲ್ಲಿ ವಿಂಗಡಣೆಯು ಸರಿಯಾಗಿ ನಡೆಯುತ್ತಿದ್ದು ಇನ್ನೂ ಕಸವಿಂಗಡಣೆ ಹೆಚ್ಚು ಹೆಚ್ಚು ತ್ಯಾಜ್ಯ ವಿಂಗಡಣೆ ಮಾಡಬೇಕೆಂದು ಸೂಚಿಸಿದರು.

ಅಯ್ಯಪ್ಪನಗರ ಆರ್.ಡಬ್ಲ್ಯೂ.ಎ. ರವರು ತ್ಯಾಜ್ಯ ವಿಂಗಡಿಸಲು ಕಸದ ಡಬ್ಬಿಗಳನ್ನು ನೀಡಲು ಕೇಳಿಕೊಳ್ಳುತ್ತಾರೆ ಅದರಂತೆ ಅಧ್ಯಕ್ಷರು ಸದ್ಯದ ಪರಿಸ್ಥಿಯಲ್ಲಿ ಬಿಬಿಎಂಪಿ ವತಿಯಿಂದ ಯಾವುದೇ ಬಿನ್‌ಗಳನ್ನು ನೀಡಲು ಪ್ರಾವಿಜನ್ ಇರುವುದಿಲ್ಲ ಆದ್ದರಿಂದ ಹಾಜರಿದ್ದ ಸತೀಶ್ ರವರು ಯಾವುದಾದರು ಕೊಡಿಗೆಗಳನ್ನು ಮಾಡುವವರಿದ್ದರೆ ಅಯ್ಯಪ್ಪನಗರ 1ನೇ ಮುಖ್ಯ ರಸ್ತೆಗೆ ಡಬ್ಬಿಗಳನ್ನು ನೀಡಲು ಸೂಚಿಸಿರುತ್ತಾರೆ.

ಆರೋಗ್ಯಸ್ವಾಮಿ ರವರು ಎಸ್.ಡಬ್ಲ್ಯೂ.ಎಂ ಸೆಗ್ರಿಗೇಷನ್ ಅವರ್‌ನೇಸ್ ಮಾಡಲು ಐಇಸಿ ನೀಡಲು ಆರ್.ಡಬ್ಲ್ಯೂ.ಎ. ಗಳಿಗೆ ಸಮಯ ಹಾಗೂ ದಿನಾಂಕ ನಿಗಧಿ ಬಗ್ಗೆ ಸಭಾಧ್ಯಕ್ಷರು ಸೂಚಿಸಿದರು.

Covid-19 Testing ಬಗ್ಗೆ ಎಲ್ಲರಿಗೂ ಅಂದರೆ ಆರ್.ಡಬ್ಲ್ಯೂ.ಎ. ಗೆ ಹಾಗೂ ಸಾರ್ವಜನಿಕರಿಗೆ Covid-19 Testing ಮಾಡಿಸಲು ಸಾರ್ವಜನಿಕರಿಗೆ ಸೂಚಿಸಬೇಕೆಂದು ನೋಡಲ್ ಅಧಿಕಾರಿಗಳ ಸೂಚಿಸಿದರು.

ಆರ್.ಡಬ್ಲ್ಯೂ.ಎ. ವಲಯ ಮಧ್ಯದಲ್ಲಿ Covid-19 Testing ಬಗ್ಗೆ ಬಿತ್ತಿ ಪತ್ರಗಳನ್ನು ಮನೆಗಳಿಗೆ ಮುದ್ರಿಸಿ ನೀಡಲು ಸೋಚಿಸಿದರು.

ವಾರ್ಡ್ ನೋಡಲ್ ಅಧಿಕಾರಿಗಳು ಕಳೆದ ಬಾರಿಯ ಸಭೆಯಲ್ಲಿ ಚರ್ಚಿಸಿದಂತೆ ಈ ಸಭೆಯಲ್ಲಿ ಇರುವ ಸಮಸ್ಯೆಯನ್ನು ಎ.ಇ, ಬಿಬಿಎಂಪಿ & ಎಸ್.ಡಬ್ಲ್ಯೂ.ಎಂ ರವರು ಜಂಟಿ ತಪಾಸಣೆ ಮಾಡಿ ಸೂಕ್ತ ಕ್ರಮ ಜರುಗಿಸುವಂತೆ ಸೂಚಿಸಿರುತ್ತಾರೆ. ಮತ್ತು ಆರೋಗ್ಯ ಸ್ವಾಮಿ ರವರು ನೀರಿನ ಸಮಸ್ಯೆಯ ಬಗ್ಗೆ ಬರುವ ದಿನಗಳಲ್ಲಿ ಬೇಸಿಗೆ ಆರಂಭವಾಗಿರುವುದರಿಂದ ನೀರಿನ ಸಮಸ್ಯೆ ಉಲ್ಲಣವಾಗಿರುವ ಬಗ್ಗೆ ತಿಳಿಸಿದರು.

ಸಭಾಧ್ಯಕ್ಷರು ಆರೋಗ್ಯಸ್ವಾಮಿ ರವರು ಬೋರ್‌ವೆಲ್‌ಗಳಿಗೆ ಇಂಗುಗುಂಡಿಗಳನ್ನು ಮಾಡಿ ಮಳೆ ಬಂದಾಗ ನೀರು ಶೇಖರಿಸುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಭೆಯಲ್ಲಿ ತಿಳಿಸಿರುತ್ತಾರೆ.

ಅಧ್ಯಕ್ಷರು ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ವಾರ್ಡ್ ಎ.ಇ. ರವರಿಗೆ ಇಳಿಸಲು ಸೂಚಿಸಿರುತ್ತಾರೆ.

ಸತೀಶ್ ಅಯ್ಯಪ್ಪನಗರ ರವರು ಅಯ್ಯಪ್ಪನಗರ ಮುಖ್ಯರಸ್ತೆಯ ಡ್ರೈನ್‌ಗಳಲ್ಲಿ ತುಂಬಿರುವ ಮಣ್ಣನ್ನು ತೆಗೆದು ಶುಚಿಗೊಳಿಸಬೇಕೆಂದು ಕೋರಿರುತ್ತಾರೆ. ಸಭಾಧ್ಯಕ್ಷರು ಮೇಜರ್ ರೋಡ್ ಇಂಜಿನೀಯರ್ ರವರನ್ನು ಡ್ರೈನ್‌ಗಳಲ್ಲಿ ತುಂಬಿರುವ ಮಣ್ಣನ್ನು ತೆಗೆಯಲು ಸೂಚಿಸಿರುತ್ತಾರೆ.

ಸತೀಶ್ ರವರು ರಸ್ತೆ ಪಕ್ಕದಲ್ಲಿ ನೇತು ಬಿದ್ದಿರುವ ಹ್ಯಾಂಗಿಗ್ ಕೇಬಲ್‌ಗಳನ್ನು ತೆರವುಗೊಳಿಸಲು ಸೂಚಿಸಿರುತ್ತಾರೆ.

ಸಭಾಧ್ಯಕ್ಷರು ವಾರಕ್ಕೊಮ್ಮೆ ಪಾದಾಚಾರಿ ಮಾರ್ಗ ಒತ್ತುವರಿ ತೆರುವು ಕಾರ್ಯಚರಣೆ ಮಾಡಲು ಇಂಜಿನೀಯರಿಂಗ್ ಹಾಗೂ ಬಿಬಿಎಂಪಿ & ಎಸ್.ಡಬ್ಲ್ಯೂ.ಎಂ ರವರು ಜಂಟಿ ತಪಾಸಣೆ ಮಾಡಿ ಸೂಕ್ತ ಕ್ರಮ ಜರುಗಿಸುವಂತೆ ಸೂಚಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ವಾರ್ಡ್ ಮಾರ್ಷಲ್ ಸೂಪರ್‌ವೈಸರ್ ರವರಿಗೆ ಕರೆ ಮಾಡಿ ಹ್ಯಾಂಗಿಗ್ ಕೇಬಲ್, ಡೆಬ್ರೀಸ್ ಕಸ ಸುರಿಯುವರಿಗೆ ಕಾದು ರಾತ್ರಿಪಾಳಿ ಕಾರ್ಯನಿರ್ವಹಿಸುತ್ತಿರುವವರಿಗೆ ದಂಡ ಹಾಕಬೇಕೆಂದು ತಿಳಿಸುತ್ತಾರೆ.

ಆರೋಗ್ಯಸ್ವಾಮಿ ರವರು 6ನೇ ಅಡ್ಡ ರಸ್ತೆ ಬ್ಲೇಸಿಂಗ್ ಗಾರ್ಡನ ರಸ್ತೆಯಲ್ಲಿ ರಸ್ತೆಯು ಹಾಳಾಗಿದ್ದು ರಸ್ತೆ ಸರಿಗೊಳ್ಳಿಸಲು ಕೋರಿರುತ್ತಾರೆ ಅದರಂತೆ ಇಂಜಿನೀಯರ್ ರವರಿಗೆ ಸೂಕ್ತ ಕ್ರಮ ಜರುಗಿಸುವಂತೆ ಸೂಚಿಸಿರುತ್ತಾರೆ.

ಮಂಜುನಾಥ ಅಯ್ಯಪ್ಪನಗರದವರು ಅಯ್ಯಪ್ಪನಗರ 1ನೇ ಮುಖ್ಯರಸ್ತೆಯಲ್ಲಿ ಚರಂಡಿಗಳು ನಿರ್ಮಾಣವಾಗಿದ್ದು ಅದಕ್ಕೆ ಸ್ಲಾಬ್‌ಗಳನ್ನು ಅಳವಡಿಸಲು ಕೋರಿರುತ್ತಾರೆ.

ಆರೋಗ್ಯಸ್ವಾಮಿಯವರು ಬೀದಿ ದೀಪಗಳ ಬಗ್ಗೆ ದೂರುಗಳನ್ನು ತಿಳಿಸಿರುತ್ತಾರೆ ಹಾಗೂ ಅದನ್ನು ಸರಿ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ಹಾಜರಿದ್ದ ಸಂಜಯ್ (ಎ.ಇ) ರವರಿಗೆ ಸದರಿ ದೂರಿನ ಬಗ್ಗೆ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ಸತೀಶ್ ಅಯ್ಯಪ್ಪನಗರದವರು ಅಯ್ಯಪ್ಪನಗರದಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ನೀರಿನ ಸಮಸ್ಯೆ ಇದೆ ಎಂದು ತಿಳಿಸಿರುತ್ತಾರೆ. ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಯವರು ಯಾರು ಇಲ್ಲದಿರುವುದರಿಂದ ಮುಂದಿನ ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಜರಾಗಬೇಕೆಂದು ಸೂಚಿಸಿರುತ್ತಾರೆ.

ನೋಡಲ್ ಅಧಿಕಾರಿಗಳು ಸಭೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ, ಎಸ್.ಡಬ್ಲ್ಯೂ.ಡಿ ಮತ್ತು ಮೇಜರ್ ರೋಡ್ ಇವರೆಲ್ಲರೂ ಮುಂದಿನ ಸಭೆಯಲ್ಲಿ ಹಾಜರಾಗಲು ಅಧ್ಯಕ್ಷರು ಕಾರ್ಯದರ್ಶಿಯವರಿಗೆ ತಿಳಿಸಿರುತ್ತಾರೆ.

ನೋಡಲ್ ಅಧಿಕಾರಿಗಳು, ವಿದ್ಯುತ್ ಅಧಿಕಾರಿಗಳು (ಬೆಸ್ಕಾಂ) ಕಡ್ಡಾಯವಾಗಿ ಹಾಜರಾಗಲು ಸೂಚಿಸಿದರು.

ಭೈರತಿ ಬಿಬಿಎಂಪಿ ಆಫೀಸ್ ಪಕ್ಕದಲ್ಲಿನ ಆರ್.ಓ ವಾಟರ್ ಪ್ಲಾಂಟ್ ದುರಸ್ಥಿತಿಯಾಗಿವುದರಿಂದ ಆ ಜಾಗದಲ್ಲಿ ಅಕ್ರಮ ಚಟುವಟಿಕೆಗಳನ್ನು ನಡೆಯುತ್ತಿದ್ದು ಆದ್ದರಿಂದ ಮಾನ್ಯ ಜಂಟಿ ಆಯುಕ್ತರ ಗಮನೆಕ್ಕೆ ತಂದು ಅಕ್ರಮ ಚಟುವಟಿಕೆಗಳು ನಡೆಯದಂತೆ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ. ಆದರಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹೂಡಿ ರವರು ತಪಾಸಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿದ್ದಾರೆ.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ-54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ